# 2014-15 ನೇ ಸಾಲಿನ ವೈಯಕ್ತಿಕ ನೀರು ಸಂಗ್ರಹಣ ಘಟಕದ ಮಾರ್ಗಸೂಚಿ

## I. ಕಾರ್ಯಕ್ರಮದ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶ:

ರಾಜ್ಯ ಕಾರ್ಯಕಾರಿಣಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ, ವೈಯಕ್ತಿಕ ನೀರು ಸಂಗ್ರಹಣ ಘಟಕದ ಸಾಮರ್ಥ್ಯ: 20ಮೀX20ಮೀx3ಮೀ ನಂತೆ ಒಟ್ಟು 1200 ಘ.ಮೀ.ವರೆಗೆ ಅಂದರೆ ಪ್ರತಿ ಘ.ಮೀ.ಗೆ ರೂ.125.00 ವೆಚ್ಚ ತಗುಲಿದ್ದಲ್ಲಿ ಈ ವೆಚ್ಚಕ್ಕೆ ಶೇಕಡಾ 50 ರಂತೆ ರೂ. 62.50/ ಘ.ಮೀ.ಗೆ ಗರಿಷ್ಠ ರೂ. 1.50 ಲಕ್ಷದವರೆಗೆ ಒಬ್ಬ ಫಲಾನುಭವಿಗೆ ಸಹಾಯಧನ ನೀಡಲು ಅವಕಾಶವಿರುತ್ತದೆ. ಇದಕ್ಕೆ ಕನಿಷ್ಠ 1.0 ಹೆ. ಪ್ರದೇಶದಲ್ಲಿತೋಟಗಾರಿಕೆ ಬೆಳೆಗಳನ್ನು ಬೆಳೆಯುವುದು ಕಡ್ಡಾಯವಾಗಿದೆ. **For smaller size ponds cost will be on pro-rata basis depend upon the command area. Minimum tank area should be 300 cub.mt.**

## II. ಕಾರ್ಯಕ್ರಮದ ಉದ್ದೇಶ:

ಮಳೆಗಾಲದಲ್ಲಿ ಅಥವಾ ಆಯಾ ಭಾಗದಲ್ಲಿ ನೀರಿನ ಸೌಕರ್ಯಗಳು ಲಭ್ಯವಿದ್ದಲ್ಲಿ ಈ ಹೆಚ್ಚುವರಿ ನೀರನ್ನು ಸಂಗ್ರಹಣೆ ಮಾಡಿ ನಂತರ ಬೇಸಿಗೆ ಕಾಲದಲ್ಲಿ ಅಥವಾ ನೀರಿನ ಅಭಾವ ವಿರುವ ಸಂದರ್ಭದಲ್ಲಿ ತೋಟಗಾರಿಕೆ ಬೆಳಗಳಿಗೆ ನೀರಿನ ಸೌಕರ್ಯ ಕಲ್ಪಿಸುವುದು (Protective Irrigation under critical conditions) ಈ ಯೋಜನೆ ಮುಖ್ಯ ಉದ್ದೇಶವಾಗಿರುತ್ತದೆ.

## III. ಅನುದಾನ ಮತ್ತು ಸಹಾಯಧನ :

2014-15 ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ಈ ಕಾರ್ಯಕ್ರಮಕ್ಕಾಗಿ ರಾಜ್ಯಕ್ಕೆ **ಭೌತಿಕ- 375 ಸಂಖ್ಯೆ ಮತ್ತು ಆರ್ಥಿಕ ರೂ.281.25 ಲಕ್ಷಗಳ** ಕ್ರಿಯಾ ಯೋಜನೆಗೆ ಅನುಮೋದನೆಯಾಗಿರುತ್ತದೆ.

## IV. ತಾಂತ್ರಿಕ ವೈಶಿಷ್ಟತೆಗಳು:

1. ನೀರು ಸಂಗ್ರಹಣೆಗೆ ಒಳಹರಿವಿಗಾಗಿ (Inlet) ಹಾಗೂ ಹೆಚ್ಚುವರಿ ನೀರನ್ನು ಹೊರ ಹಾಕಲು (Outlet) ಅಳತೆಯ ಸಿಮೆಂಟ್ ಮತ್ತು ಮಣ್ಣಿನ ಮಿಶ್ರಣದೊಂದಿಗೆ (1:8) ಇಟ್ಟಿಗೆ ಫ್ರೇಮ್ ವರ್ಕ್ ನಿರ್ಮಾಣ ಮಾಡುವುದು (ಅವಶ್ಯ ವಿದ್ದಲ್ಲಿ ಮಾತ್ರ). ನೀರಿನ ಒಳಹರಿವು , ಹೊರಹರಿವು ಗಣನೆಗೆ ತೆಗೆದುಕೊಂಡು inlet ಮತ್ತು outlet ಗಾತ್ರವನ್ನು ನಿಗಧಿಪಡಿಸಿಕೊಳ್ಳಬೇಕು.
2. ನೀರು ಭೂಮಿಯಲ್ಲಿ ಇಂಗದಂತೆ ಸಂಗ್ರಹಣೆ ಮಾಡಲು ನೀರು ಸಂಗ್ರಹಣ ಘಟಕದ ಒಳ ಭಾಗವನ್ನು 300 Micron LDPE Film lining ಅಥವಾ Concrete lining ಅಥವಾ Stone pitching ಮಾಡುವುದು ಇವುಗಳಲ್ಲಿ ಯಾವುದಾದರು ಒಂದನ್ನು ಬಳಸಿ ಶೇಖರಣೆ ಮತ್ತು ಸಂಗ್ರಹಿತ ನೀರು ಭೂಮಿಯಲ್ಲಿ ಇಂಗಿ ಹೋಗದಂತೆ ತಡೆಗಟ್ಟುವುದು Lining ನ ಮುಖ್ಯ ಉದ್ದೇಶ.
3. Cost for non-lined ponds / tanks (only in black cotton soils) will be 30% less. For smaller size of the ponds / dug wells, cost will be admissible on pro rata basis depending upon the command area. Maintenance will be ensured by the beneficiary.

## V. ಫಲಾನುಭವಿಗಳ ಅರ್ಹತೆ:

1) ಫಲಾನುಭವಿಗಳು ರೈತರಾಗಿದ್ದು ಸದರಿ ರೈತರ ಹೆಸರಿನಲ್ಲಿ ಪಹಣಿ ಇರಬೇಕು.

2) ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರವನ್ನು ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.

3) ಮಹಿಳೆಯ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿಯನ್ನು ಸಲ್ಲಿಸುವುದನ್ನು ಉತ್ತೇಜಿಸಬೇಕು.

## VI. <u>ಅರ್ಜಿಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ</u>:-

1) ಪ್ರಕಟಣೆ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗದಿಪಡಿಸಿದ ಗುರಿ ಮತ್ತು ನಿಗದಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾದ ಮಾಹಿತಿ ಇರತಕ್ಕದ್ದು.

2) ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.

   a. ರೈತರು ನಿಗದಿತ ಅರ್ಜಿಯಲ್ಲಿ ಭರ್ತಿ ಮಾಡಿ ಅರ್ಜಿಯನ್ನು ಸಮೀಪದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ನೀಡಬೇಕಾಗಿರುತ್ತದೆ.
   b. ಪಹಣಿ (RTC) ದಿನಾಂಕ ಜನವರಿ -2014 ರ ನಂತರದ್ದಾಗಿರಬೇಕು.
   c. ಉದ್ದೇಶಿತ 1.00 ಹೆ. ಜಮೀನುನಲ್ಲಿ ಕಡ್ಡಾಯವಾಗಿ ತೋಟಗಾರಿಕೆ ಬೆಳೆಗಳು ಬೆಳೆಯಬೇಕು/ ಬೆಳೆದಿರಬೇಕು. ಸರ್ವೇ ನಂಬರ್, ತೋಟಗಾರಿಕೆ ಬೆಳೆಯ ಹೆಸರು ಮತ್ತು ಬೆಳೆಗಳ ವಿಸ್ತೀರ್ಣದ ಬಗ್ಗೆ ಮಾಹಿತಿಯನ್ನು ನೀಡುವುದು.
   d. ಅರ್ಜಿಯನ್ನು ಪರಿಶೀಲಿಸಿದ ನಂತರ ತಾಲ್ಲೂಕು ಮಟ್ಟದ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.

3) ತಾಲ್ಲೂಕು ಹಿಸತೋನಿ/ಸತೋನಿ ರವರು ಅರ್ಜಿ ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ ಕೂಡಲೇ ತೋಉನಿ(ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು. ತೋಟಗಾರಿಕೆ ಉಪ- ನಿರ್ದೇಶಕರು (ಜಿಪಂ) ರವರು ಜಿಲ್ಲೆಯ ಎಲ್ಲಾ ಹಿಸತೋನಿ / ಸತೋನಿರವರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ, ತಾಲ್ಲೂಕುವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು.

4) ಜಿಲ್ಲೆಗೆ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಪಾಲಿಸಿಕೊಂಡು ಜಿಲ್ಲಾ ಸಮಿತಿಯ ಗಮನಕ್ಕೆ ತಂದು ಅಥವಾ ಅನುಮತಿ ಪಡೆದು ತೋಟಗಾರಿಕೆ ಉಪ ನಿರ್ದೇಶಕರು ಘಟಕ ನಿರ್ಮಿಸಲು ಲಿಖಿತವಾಗಿ (ವೈಯಕ್ತಿಕ ನೀರು ಸಂಗ್ರಹಣಾ ಘಟಕ ಕಾಮಗಾರಿ ಮುಗಿಸಲು ಗರಿಷ್ಠ 30 ದಿನಗಳ ಅವಧಿ ನೀಡುವುದು. 30 ದಿನಗಳಲ್ಲಿ ಘಟಕ ನಿರ್ಮಿಸದಿದ್ದಲ್ಲಿ ಲಿಖಿತ ಅನುಮತಿ ತನ್ನಿಂದ ತಾನೇ ರದ್ದಾಗುತ್ತದೆ ಎಂದು ತಿಳಿಸುವುದು) ಅನುಮತಿ / ಕಾರ್ಯಾದೇಶ ಪತ್ರವನ್ನು ನೀಡುವುದು.

## VII. ತಾಂತ್ರಿಕ ಪರಿಶೀಲನಾ ಕ್ರಮಗಳು :-

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠಾನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

1. ಫಲಾನುಭವಿಯಿಂದ ಅರ್ಜಿ ಸ್ವೀಕರಿಸಿದ ನಂತರ ಸಂಬಂಧಿಸಿದ ತಾಲ್ಲೂಕು ಅಧಿಕಾರಿ / ಸಂಬಂಧಿಸಿದ ರೈತ ಸಂಪರ್ಕ ಅಧಿಕಾರಿ ಸ್ಥಳ ಪರಿಶೀಲನೆ ಮಾಡುವುದು. ಸೂಕ್ತತೆ ಬಗ್ಗೆ ತಾಂತ್ರಿಕವಾಗಿ ದೃಢೀಕರಿಸಬೇಕು ಹಾಗೂ ಫಲಾನುಭವಿಯ ತೋಟಗಾರಿಕೆ ಬೆಳೆ ತಳಿ, ಸರ್ವೆ ನಂಬರ್ ಮತ್ತು ಒಟ್ಟು ವಿಸ್ತೀರ್ಣದ ವಿವರಗಳನ್ನು ದೃಢೀಕರಿಸಿ ವರದಿಯನ್ನು ನೀಡಬೇಕು.
2. ಪೂರ್ಣ ಪ್ರಮಾಣದ ಕಾಮಗಾರಿ / Structural work ಮುಗಿದ ಕೂಡಲೇ ತಾಲ್ಲೂಕು ಅಧಿಕಾರಿ / ಸಂಬಂಧಿಸಿದ ರೈತ ಸಂಪರ್ಕ ಅಧಿಕಾರಿ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ತಾಂತ್ರಿಕವಾಗಿಶಿಫಾರಸ್ಸು ಮಾಡಿರುವ ಪರಿಕರಗಳನ್ನು ಬಳಸಿರುವ ಬಗ್ಗೆ ಪರಿಶೀಲಿಸಿ ಖಾತ್ರಿ ಮಾಡಿಕೊಳ್ಳಬೇಕು. ಈ ಘಟಕಕ್ಕೆ ಬಳಸಿದ ವಸ್ತುಗಳ ಗುಣಮಟ್ಟದ ಬಗ್ಗೆ ದೃಢೀಕರಣ ಮಾಡುವುದು.
3. **ಸದರಿ ಘಟಕಕ್ಕೆ ಕೇಂದ್ರ / ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಅಥವಾ ಬೇರೆ ಇಲಾಖೆಯ ಯೋಜನೆಗಳಿಂದ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬುದರ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.**
4. ವೈಯಕ್ತಿಕ ನೀರು ಸಂಗ್ರಹಣ ಕಾಮಗಾರಿಯು ಪ್ರಾರಂಭದಿಂದ ಮುಕ್ತಾಯದ ಹಂತದವರೆಗೆ ಸಂಬಂಧಿಸಿದ ಮೇಲ್ವಿಚಾರಣೆ ತಾಲ್ಲೂಕು ಅಧಿಕಾರಿ ಮತ್ತು ರೈತ ಸಂಪರ್ಕ ಕೇಂದ್ರದ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ.
5. ವೈಯಕ್ತಿಕ ನೀರು ಸಂಗ್ರಹಣ ಘಟಕ 1200 ಘ.ಮೀ. ಶೇಖರಣಾ ಸಾಮರ್ಥ್ಯ ಹೊಂದಿದ್ದು 1.00 ಹೆಕ್ಟರ್ (2.5 ಎಕರೆ) ತೋಟಗಾರಿಕೆ ಬೆಳೆ ಪ್ರದೇಶಕ್ಕೆ ನೀರನ್ನು ಒದಗಿಸುವ ಸಾಮರ್ಥ್ಯಕ್ಕೆ ವಿನ್ಯಾಸವನ್ನು ರೂಪಿಸಬೇಕು.
6. ಘಟಕದ ಉದ್ದ, ಅಗಲ ಮತ್ತು ಆಳ ಆಯಾ ಜಮೀನಿನ ವಿನ್ಯಾಸಕ್ಕೆ ತಕ್ಕಂತೆ ತೆಗೆದುಕೊಳ್ಳಲು ಅವಕಾಶವಿದೆ (on prorata basis).
7. ನೀರು ಸಂಗ್ರಹಣ ಘಟಕದ ಆಳವನ್ನು ಜಮೀನಿನ ಮೇಲ್ಮೈ ಭಾಗದಿಂದ ಕೆಳ ಹಂತದವರೆಗೆ (From soil surface to bottom of the structure) ಅಳತೆ ಮಾಡಬೇಕಾಗಿರುತ್ತದೆ. ಯಾವುದೇ ಕಾರಣಕ್ಕೂ ಬದುಗಳ ಎತ್ತರವನ್ನು ಪರಿಗಣಿಸುವಂತಿಲ್ಲ.

ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ.100 ರಷ್ಟು) ತಾಕು ಪರಿಶೀಲನೆ ನಡೆಸಬೇಕು. ಸತೋಅ (RSK) ರವರು ಪರಿಶೀಲಿಸಿದ ತಾಕುಗಳ ಪೈಕಿ ಕನಿಷ್ಟ ಶೇ.50% ರಷ್ಟು ತಾಕುಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು. ಜಿಲ್ಲೆಯ ತೋಉನಿ (ಜಿಪಂ) ರವರು ಶೇ.5% ರಷ್ಟು ತಾಕುಗಳ ಪರಿಶೀಲನೆಯನ್ನು ಕಡ್ಡಾಯವಾಗಿ ಮಾಡುವುದು.

ಕಾಮಗಾರಿ ಪೂರ್ಣಗೊಂಡ ನಂತರ ರೈತ ಸಂಪರ್ಕ ಕೇಂದ್ರದ ಅಧಿಕಾರಿ / ತಾಲ್ಲೂಕು ಮಟ್ಟದ ಅಧಿಕಾರಿ ಸ್ಥಳ ಪರಿಶೀಲನೆ ಮಾಡಿ, ಕಾಮಗಾರಿಯಲ್ಲಿ ತಾಂತ್ರಿಕವಾಗಿ ಶಿಫಾರಸ್ಸು ಮಾಡಿರುವ ಗುಣಮಟ್ಟದಂತೆ ನಿರ್ಮಿಸಿರುವ ಬಗ್ಗೆ ಖಚಿತಪಡಿಸಿಕೊಂಡ ದೃಢೀಕರಣ ಪತ್ರ ಸಲ್ಲಿಸಿದ ನಂತರವೇ ತೋಟಗಾರಿಕೆ ಉಪ ನಿರ್ದೇಶಕರು ಅಂತಿಮ ಸಹಾಯಧನ ಬಿಡುಗಡೆ ಮಾಡುವುದು ಕಡ್ಡಾಯವಾಗಿರುತ್ತದೆ.

ಘಟಕವು ಕನಿಷ್ಠ 5 ವರ್ಷ ಸದುಪಯೋಗಪಡಿಸಿಕೊಳ್ಳುವುದಾಗಿ ಎಂದು ಫಲಾನುಭವಿಯಿಂದ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನು ಪಡೆಯುವುದು.

**VIII. ಸಹಾಯಧನ ವಿತರಣೆ:**

1) ಜಿಲ್ಲೆಯ ತೋಉನಿ(ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಸತೋನಿ / ಹಿಸತೋನಿ ನೀಡಿರುವ ಘಟಕದ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದಲ್ಲಿ ಮಾತ್ರ ಸಹಾಯಧನವನ್ನು ಬಿಡುಗಡೆ ಮಾಡುವುದು.

2) ವೈಯಕ್ತಿಕ ನೀರು ಸಂಗ್ರಹಣ ಘಟಕವು ಪೂರ್ಣವಾಗಿ ಮುಗಿದು lining ಮುಗಿದ ನಂತರ ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆದಿರುವ ಬಗ್ಗೆ ದೃಢೀಕರಿಸಿಕೊಂಡು ಸಹಾಯಧನ ಮೊತ್ತವನ್ನು ಬ್ಯಾಂಕ್ ಖಾತೆಗೆ ECS / NEFT ಮೂಲಕ ಜಮಾ ಮಾಡುವುದು.

**IX.ಆರ್ಥಿಕ ಪ್ರತ್ಯಾಯೋಜನೆ (Delegation of Power) :**

ಈ ಯೋಜನೆಯಡಿ ಮಂಜೂರಾತಿ ನೀಡುವ ಮತ್ತು ಸಹಾಯಧನ ಬಿಡುಗಡೆ ಮಾಡುವ ಅಧಿಕಾರವು ಆಯಾ ಜಿಲ್ಲೆಯ ತೋ.ಉ.ನಿ. ರವರಿಗೆ ನೀಡಲಾಗಿರುತ್ತದೆ.

**XI. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).**

1. ಆಯಾ ಮಾಹೆಯ ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ KSHMA ಕಛೇರಿಗೆ ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಪ್ರತಿ ಮಾಹೆಯ ದಿನಾಂಕ: 02 ರೊಳಗಾಗಿ ತಪ್ಪದೆ ವರದಿಯನ್ನು ಕಳುಹಿಸುವುದು.